## ನನ್ನ ಕಥಾಪ್ರಸಂಗ

ಕತೆ ಬರೆಯುವ ಪ್ರಕ್ರಿಯೆ ಒಂದು ಚೇತೋಹಾರಿ ಪಯಣ. ಕತೆಯನ್ನು ಬರೆಯುವ ಸಂದರ್ಭದ ಉತ್ಕಟ ಸಂತೋಷವು ನನ್ನನ್ನು ಹಗುರುಗೊಳಿಸುತ್ತದೆ, ಅಪಾರ ಚೈತನ್ಯವನ್ನು ನೀಡುತ್ತದೆ. ನನ್ನ ಹದಗೊಂಡ ಎದೆಯ ನೆಲದಲ್ಲಿ ಬಿತ್ತನೆಯಾದ ಬೀಜವು ಎಂದಿಗೂ ಮುರುಟಿ ಹೋಗಿಲ್ಲ. ಮೊಳಕೆ ಒಡೆಯದೆ ಹಾಗೆಯೇ ಗರ್ಭಸ್ಥವಾಗಿದೆ. ಅದು ಮೂರು ದಿನಗಳ ಕಾಲದಿಂದ ಮೂವತ್ತು ವರ್ಷಗಳ ಅವಧಿಯದಾಗಿರಬಹುದು. ಒಂದೇ ಸಾರಿ ರಾತ್ರೋ ರಾತ್ರಿ ನನಗರಿವಾಗದೇ ಪಲ್ಲವಿಸಿ ಹೂವು, ಹಣ್ಣುಗಳಿಂದ ಜಗ್ಗುತ್ತಿರುತ್ತದೆ. ಅಭಿವ್ಯಕ್ತಿಯ ಕಲೆಗಾರಿಕೆ ಮಾತ್ರ ನನ್ನ ಕಣ್ಣೆದುರಿಗೆ ಸಹವರ್ತಿಯಾಗಿ ಮೆರೆಯುತ್ತಿರುತ್ತದೆ. ಅದರ ತಾಂತ್ರಿಕತೆಯ ಅಂಶ ನನ್ನ ಅರಿವಿಗೆ ಇದುವರೆಗೆ ದಕ್ಕಿಲ್ಲ. ಒಂದು ಘಟನೆಯ ಬಗ್ಗೆ ಅಥವಾ ವ್ಯಕ್ತಿ, ಅಥವಾ ಒಂದು ಸಂಭಾಷಣೆ ಇಲ್ಲವೇ ಬೀಜ ಸ್ವರೂಪದ ಒಂದು ವಿಷಯ ಮಾತ್ರ ಪ್ರಜ್ಞಾಪೂರ್ವಕ ಮತ್ತು ಉಳಿದೆಲ್ಲಾ ಅದರ ಸುತ್ತಲಿನ ನನ್ನ ಕಲ್ಪನೆ.

ನಾನು ಆಗ ಕೃಷ್ಣರಾಜಸಾಗರದಲ್ಲಿ ಮಾಧ್ಯಮಿಕ ಶಾಲೆಯ ವಿದ್ಯಾರ್ಥಿನಿಯಾಗಿದ್ದೆ. ಅಲ್ಲಿನ ಸರಕಾರಿ ಉದ್ಯೋಗಿಗಳ ವಸತಿಗೃಹಗಳು ಸಸ್ಯರಾಶಿಯಿಂದ ಜಗ್ಗುತ್ತಿದ್ದವು. ಶಾಲೆ ಮುಗಿದ ಕೂಡಲೇ ನಾನು ಓಡುತ್ತಿದ್ದುದು ಚಂದ್ರಮೌಳೇಶ್ವರ ದೇವಸ್ಥಾನದ ಬಳಿ. ಅದರ ಆವರಣದಲ್ಲಿದ್ದ ಸಂಪಿಗೆ ಮರಗಳ ಮೇಲೆ ಆಡುತ್ತಿದ್ದ ಮರಕೋತಿಯಾಟ ನನ್ನ ಪ್ರಿಯವಾದ ಹವ್ಯಾಸವಾಗಿತ್ತು. ಅರ್ಚಕರ ಮಗಳು ವಸಂತಿ ನನ್ನ ಗೆಳತಿ. ಹೀಗಾಗಿ ತುಸು ಹೆಚ್ಚಿನ ಪ್ರಾಶಸ್ತ್ಯವೇ ನನಗಿತ್ತು. ಅದೊಂದು ದಿನ ಆ ಆವರಣವನ್ನು ದಾಟಿ ಅಪಾರ ದೂರ ಹೋಗಿದ್ದೆವು. ಸಂಜೆಯಾಗುತ್ತಿತ್ತು. ಅಲ್ಲಿನ ಬೇಲಿಯ ಬದಿಯಲ್ಲಿದ್ದ ಯಾರಿಗೂ ಸೇರದ ಸೀಬೆ ಮರವನ್ನು ಲೂಟಿ ಮಾಡುವ ಉದ್ದೇಶ ನಮ್ಮದಾಗಿತ್ತು. ಹೀಗಾಗಿ ನಾಲ್ಕೈದು ಗೆಳತಿಯರು ಅಲ್ಲಿಗೆ ಹೋಗಿದ್ದೆವು. ಉಳಿದವರೆಲ್ಲಾ ಮರ ಹತ್ತಿದ್ದರು. ನಾನು ಹತ್ತಲು ಮರದ ಬಳಿ ಸಾರುತ್ತಿದ್ದಂತೆಯೇ ಒಂದು ಅತಿ ಸೂಕ್ಷ್ಮ ಶಬ್ದ ಕೇಳಿಸಿತು. ನಾನು ನಿಂತಲ್ಲಿಯೇ ನಿಂತು ಸುತ್ತಲೂ ಕಣ್ಣು ಹಾಯಿಸಿದೆ. ಊಹುಂ ಏನೂ ಕಾಣಲಿಲ್ಲ. ಆದರೂ ಒಳಗಡೆ ಏನೋ ಒಂದು ಭಾವ. ಮರ ಹತ್ತದೆ ಅಲ್ಲಿಯೇ ನಿಂತು ಮೆಲ್ಲನೆ ನಿಟ್ಟುಸಿರು ಬಿಡುವಂತೆ ಬರುತ್ತಿದ್ದ ಸದ್ದಿಗೆ ಕಿವಿಯಾನಿಸಿ ಕಣ್ಣನ್ನು ಮಾತ್ರ ಹೊರಳಿಸಿದೆ. ಹಾಗೆಯೇ ಬೇಲಿಯ ಒಂದೊಂದೇ ಭಾಗವನ್ನು ನಿಟ್ಟಿಸಿ ನೋಡುತ್ತಿದ್ದಂತೆಯೇ ಅದು ಕಂಡು ಬಂದಿತು. ಉದ್ದನೆಯ ಹಸಿರು ಬಣ್ಣದ ದೇಹದ, ಬಾಲವಿದ್ದ ಪ್ರಾಣಿ. ಅದರ ದೇಹದ ಮೇಲೆ ಉರುಟುರುಟಾದ ಬಿಲ್ಲೆಗಳಂತೆ ಚರ್ಮ ಹರಡಿತ್ತು. ಅದನ್ನು ಕಣ್ಣಲ್ಲಿ ಕಣ್ಣಿಟ್ಟು ನೋಡುವಷ್ಟರಲ್ಲಿ ನನ್ನ ದೇಹ ಅಪಾರ ಹೆದರಿಕೆಯಿಂದ ಬೆವತು ಹೋಯಿತು. ಅದು ತೂಗಿ ತೂಗಿ ಒಂದು ಕಾಲನ್ನು ಮುಂದಿಟ್ಟು ನಂತರ ಇನ್ನೊಂದು ಕಾಲನ್ನು ಮುಂದಿಡುತ್ತಿತ್ತು. ಹಲವು ದಶಕಗಳು ಕಳೆದರೂ ಆ ಘಟನೆ ನನ್ನ ಕಣ್ಣೆದುರಿಗೆ ಹಾಗೆಯೇ ತೆರೆದುಕೊಳ್ಳುತ್ತದೆ. ನಾನು ನಿಂತಲ್ಲಿಯೇ ಮರಗಟ್ಟಿ ಹೋಗಿದ್ದೆ. ಭಯ, ಆತಂಕ, ಕುತೂಹಲದಿಂದ ಹೊಸ ಅನುಭವಕ್ಕೆ ತೆರೆದುಕೊಳ್ಳುತ್ತಿದ್ದ ತುಡಿತಗಳು; ಎಷ್ಟು ಹೊತ್ತು ಹಾಗೆಯೇ ನಿಂತಿದ್ದೆನೋ ನನಗೆ ಗೊತ್ತಿಲ್ಲ. ಮರದ ಮೇಲೆ ಹತ್ತಿ ಹಣ್ಣು ಕೊಯ್ಯುತ್ತಿದ್ದ ಗೆಳತಿಯೊಬ್ಬಳು ಒಂದು ಹಣ್ಣನ್ನು ನನ್ನತ್ತ ಬಿಸಾಡಿದಳು. ಬಲವಾದ ಏಟು ಬಿದ್ದಾಗ ನಾನು ಎಚ್ಚೆತ್ತುಕೊಂಡೆ. ನಾನು ಹೇಳಿದ್ದನ್ನು ಅವರ್ಯಾರೂ ನಂಬಲಿಲ್ಲ. ನನ್ನ ಕಣ್ಣುಗಳಿಗೆ ಕಾಣುತ್ತಿದ್ದ ಆ ಪ್ರಾಣಿ ಅವರ ಕಣ್ಣಿಗೆ ಕಾಣಲೇ ಇಲ್ಲ; ಅದರ ಸದ್ದು ಅವರ ಕಿವಿಗಳಿಗೆ ಕೇಳಿಸಲೇ ಇಲ್ಲ. ಆ ಪ್ರಾಣಿ ನನ್ನನ್ನು ಎಡೆ ಬಿಡದೆ ಕಾಡಿತು. ಅದು ಮೊದಲು ಭಯಗೊಳಿಸಿತು, 'ಹಿಸ್ಸ್' ಎಂದಿತು. ಕೋರೆ ದಾಡೆಗಳನ್ನು (ಅದಕ್ಕೆ ಅವು ಇರಲಿಲ್ಲ)

